ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಬೇಡಿಕೆ ಸಂಖ್ಯೆ 6 – ಮೂಲಭೂತ ಸೌಕರ್ಯಗಳ ಅಭಿವೃದ್ಧಿ 259

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಸಚಿವರು) (ಶ್ರೀ ಆರ್. ರೋಷನ್ ಬೇಗ್, ಮಾನ್ಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2015 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 852.00 ಲಕ್ಷ ರೂ.ಗಳು ಮತ್ತು ಬಂಡವಾಳ ಖಾತೆಯಲ್ಲಿ 62880.08 ಲಕ್ಷ ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವು ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ.

ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಶ್ರೀ ಶಿವರಾಜ್ ಎಸ್ ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು) ಮಾನ್ಯ ಅಧ್ಯಕ್ಷರೆ, 2014ರ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿಯಾದಂತೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನುಮಂಡಿಸಲಾಯಿತು

ಅಧ್ಯಕ್ಷರು:– ಈಗ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿ ಮಾಡಿ ತಂದಿದ್ದೀರಿ. ಅದರ ಬಗ್ಗೆ explain ಮಾಡಿ.

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ಮೊನ್ನೆ ಬಹಳಷ್ಟು ಹಿರಿಯ ಶಾಸಕರು ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಕುಮಾರಸ್ವಾಮಿಯವರು ಮತ್ತು ಅನೇಕ ಸದಸ್ಯರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೆಲವೊಂದು ವಿಷಯಗಳನ್ನು ತಿದ್ದುಪಡಿ ಮಾಡಲಾಗಿದೆ. ಉದಾಹರಣೆಗೆ ನಮ್ಮಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಬಗ್ಗೆ ಪ್ರಸ್ತಾಪ ಮಾಡಿದರು, ಅದಕ್ಕೆ ಸರ್ಕಾರ ಈಗಾಗಲೇ ಮತ್ತೊಂದು Lake Development Authority ಯನ್ನು ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಹಿರಿಯ ಸದಸ್ಯರಾದ ಬೋಪಯ್ಯನವರು ಪ್ರಾಧಿಕಾರದ ಅಧಿಕಾರಿಯ ಬಗ್ಗೆ ಕೇಳಿದ್ದರು, ಅದಕ್ಕೆ ನಮ್ಮ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಜವಾಬ್ದಾರಿ ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಮಸೂದೆಯಲ್ಲಿ ಹೊಸ ತಿದ್ದುಪಡಿಗಳನ್ನು ತಂದಿದ್ದೇವೆ. ನಮ್ಮ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಈ ವಿಷಯ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿಲ್ಲವೆಂದು ಹೇಳಿದ್ದರು, ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡದೆ ಈ ವಿಧೇಯಕವನ್ನು ತರುವುದಕ್ಕಾಗುವುದಿಲ್ಲ. ಎಲ್ಲಾ ವಿಚಾರಗಳ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಇಲ್ಲಿಗೆ ತಂದಿದ್ದೇವೆ. ನಮ್ಮ ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು ಕೆರೆ ಅಭಿವೃದ್ಧಿ ಪ್ರಾಧಿಕಾರ ಎಂದು ಹೇಳುವ ಬದಲು ಅದರ ಹೆಸರನ್ನು **ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ** ಎಂದು ಮಾಡಬೇಕೆಂದರು. ಅವರು ಹೇಳಿದಂತೆ ಹೆಸರನ್ನು ಸಹ **ಕರ್ನಾಟಕ ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರ** ಎಂದು ಬದಲಾವಣೆ ಮಾಡಿದ್ದೇವೆ. ಅದರ ಜೊತೆಗೆ ಮೂವರು ಶಾಸಕರಾದ ಕುಮಾರಸ್ವಾಮಿಯವರು, ಡಿ.ಸಿ. ತಮ್ಮಣ್ಣನವರು ಮತ್ತು ರಮೇಶ್ ಕುಮಾರ್‌ರವರು ಕೆರೆಗಳಲ್ಲಿ ಹೂಳು ತೆಗೆಯಲಿಕ್ಕೆ ಅವಕಾಶವನ್ನು

ಕಲ್ಪಿಸಬೇಕೆಂದು ಹೇಳಿದ್ದರು. ಅದನ್ನು ಸಹ ಈ ಹೊಸ ವಿಧೇಯಕದಲ್ಲಿ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿದ್ದೇವೆ. ವಿಧೇಯಕದಲ್ಲಿ ಹೂಳು ತೆಗೆಯುವುದರ ಬಗ್ಗೆ ಮತ್ತು ಅದರ ಬಗ್ಗೆ ಸರ್ವೆ ಮಾಡುವುದರ ಬಗ್ಗೆ ನೀವು ಪೂರ್ಣ ಪ್ರಮಾಣದ trench ಹೊಡೆಯಬೇಕೆಂದು ಹೇಳಿದ್ದರು, ಅದನ್ನು ವಿಧೇಯಕದಲ್ಲಿ ಮಂಡನೆ ಮಾಡಿದ್ದೇವೆ. ನಮ್ಮ ವಿಶ್ವೇಶ್ವರ ಹೆಗಡೆ ಕಾಗೇರಿಯವರು 2013–14ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಹೇಳಿದ್ದಿರಿ ಆದರೆ ಇದನ್ನು ತರುವಲ್ಲಿ ತಡವಾಯಿತು ಎಂಬ ಮಾತನ್ನು ಹೇಳಿದರು. ಇದನ್ನು ತರಲಿಕ್ಕೆ ತಡವಾದುದಕ್ಕೆ ಕಾರಣವೇನೆಂದರೆ ಎಲ್ಲಾ ಇಲಾಖಾಧಿಕಾರಿಗಳೊಂದಿಗೆ, ಕೆಲವು ತಜ್ಞರೊಂದಿಗೆ ಕೆಲವು ವಿಚಾರಗಳನ್ನು ಚರ್ಚೆ ಮಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಎರಡರಿಂದ ಮೂರು ಬಾರಿ ಸಭೆಗಳನ್ನು ಮಾಡಿ ಈ ವಿಧೇಯಕವನ್ನು ತರಬೇಕಾದರೆ ಸ್ವಲ್ಪ ತಡವಾಯಿತು. ಈಗ ಈ ವಿಧೇಯಕವನ್ನು ತಂದಿದ್ದೇವೆ. ಎಲ್ಲೋ ಒಂದು ಕಡೆ ನಮ್ಮ ಸರ್ಕಾರದ ಆಸೆ ಏನೆಂದರೆ ಕೆರೆಯನ್ನು ಕಾಪಾಡಬೇಕು, ಕೆರೆಯ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕೆಂಬ ದೃಷ್ಟಿಕೋನ ಇಟ್ಟುಕೊಂಡು ಮಾಡಿದ್ದೇವೆ. ಇವೆಲ್ಲದರ ಜೊತೆಗೆ ನಮ್ಮ ಬಿ.ಆರ್. ಪಾಟೀಲರು ಹೊಸ ಕೆರೆಯ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿಲ್ಲವೆಂಬ ಮಾತನ್ನು ಹೇಳಿದರು. ಈ ಹೊಸ ಕೆರೆಗಳ ಬಗ್ಗೆ ಈ ವಿಧೇಯಕದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈಗ ಇರುವ ಕೆರೆಗಳನ್ನು ಸಂರಕ್ಷಣೆ ಮಾಡುವುದರ ಜೊತೆಗೆ ಹೊಸ ಕೆರೆಗಳನ್ನು ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಮ್ಮ ಜೆಡಿಎಸ್ ಶಾಸಕರು ಸಿರಿಜ್ಯಾಕ್ ಚೆಕ್ ಡ್ಯಾಂಗಳನ್ನು ಮಾಡುವುದಕ್ಕೆ ಹೇಳಿದರು. ಸಿರಿಜ್ಯಾಕ್ ಚೆಕ್ ಡ್ಯಾಂಗಳನ್ನು ಮಾಡುವುದಕ್ಕೆ ನಮ್ಮ ಸಣ್ಣ ನೀರಾವರಿ ಇಲಾಖೆಯಿಂದ ಪ್ರತಿಯೊಂದು ತಾಲ್ಲೂಕಿನಿಂದ ಪ್ರತಿಯೊಂದು ಕ್ಷೇತ್ರಕ್ಕೂ ಕೊಡುವಂಥ ಕೆಲಸವನ್ನು ಮಾಡುತ್ತೇವೆ ಮತ್ತು ಗೋವಿಂದ ಕಾರಜೋಳರವರು ಇದರಲ್ಲಿ ಮೂರು ಜನ ಮಾತ್ರ ಸದಸ್ಯರಿದ್ದಾರೆ, ನಾಲ್ಕು ಜನ ಸದಸ್ಯರನ್ನಾಗಿ ಮಾಡುವಂತೆ ಹೇಳಿದ್ದರು, ಒಂದು ಸಾಮಾನ್ಯ, ಒಂದು ಮಹಿಳೆ, ಒಂದು ಪರಿಶಿಷ್ಟ ಜಾತಿ ಮತ್ತು ಒಂದು ಪರಿಶಿಷ್ಟ ಪಂಗಡದಲ್ಲಿ ರಾಜ್ಯ ಮಟ್ಟದಲ್ಲಿ ಅವರನ್ನು ಸದಸ್ಯರನ್ನಾಗಿ ಮಾಡಲಿಕ್ಕೆ

ಅವಕಾಶ ಮಾಡುವಂತೆ ಹೇಳಿದ್ದರು, ಅದಕ್ಕೂ ಅವಕಾಶವನ್ನು ಕಲ್ಪಿಸಿದ್ದೇವೆ. ಇದಕ್ಕೆ ಮುಖ್ಯ ಇಂಜಿನಿಯರ್‌ರವರನ್ನು, ತಾಂತ್ರಿಕ ಸಿಬ್ಬಂದಿಯೇ ಇಲ್ಲ, ಇದಕ್ಕೆ ತಾಂತ್ರಿಕ ಸಿಬ್ಬಂದಿಯನ್ನು ಮಾಡಿದರೆ ಬಹಳ ಚೆನ್ನಾಗಿರುತ್ತದೆ ಎನ್ನುವ ಮಾತನ್ನು ಹೇಳಿದ್ದರು. ಅದಕ್ಕೆ South division ನ ಮುಖ್ಯ ಇಂಜಿನಿಯರ್‌ರವರನ್ನು ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅದರ ಜೊತೆಗೆ ಇನ್ನೊಂದು ಬಹಳ ಮುಖ್ಯವಾದುದು, 15 ದಿವಸಗಳ ನೋಟೀಸ್ ಅನ್ನು ಏಕೆ ಕೊಡಬೇಕೆಂದು ಬಹಳಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದರು, 15 ದಿವಸಗಳ ನೋಟಿಸ್ ಕೊಡಲಿಕ್ಕೆ ಕಾನೂನು ಇಲಾಖೆ ಒಪ್ಪಿಕೊಳ್ಳಲಿಲ್ಲ, ಯಾವುದೇ ಕಾರಣಕ್ಕೂ ಅದು ವಿಕರೂಪವಾಗುತ್ತದೆ. ಅದಕ್ಕೆ ಯಾರಾದರೂ ತಪ್ಪು ಮಾಡಿದರೆ ಅದಕ್ಕೆ ಅವಕಾಶವನ್ನು ಕೊಡೋಣ. ನೇರವಾಗಿ ಕೋರ್ಟ್‌ಗೆ ಹೋಗುವುದಕ್ಕೆ ಬದಲು ಪ್ರಾಧಿಕಾರಕ್ಕೆ ಬಂದ ನಂತರ ಕೋರ್ಟ್‌ಗೆ ಹೋಗಬೇಕು ಎಂದು ಈ ವಿಧೇಯಕದಲ್ಲಿ ನಾವು ಮಂಡಿಸಿದ್ದೇವೆ. ಇದೊಂದು ಹೊಸ ಪ್ರಯೋಗ, ಇವತ್ತಿನವರೆಗೂ ಹಿಂದೆ ಮಾಡಲಾರದಂಥ ಪ್ರಯೋಗಗಳನ್ನು ನಮ್ಮ ಮುಖ್ಯಮಂತ್ರಿಗಳು ಕೆರೆ ಅಭಿವೃದ್ಧಿಯನ್ನು ಮಾಡಬೇಕು. ಒತ್ತುವರಿಯನ್ನು ಬಿಡಿಸಬೇಕು ಇದಕ್ಕೆ ಒಂದು ಪ್ರಾಧಿಕಾರವನ್ನು ಮಾಡಬೇಕೆಂದು ಅದಕ್ಕೆ ಈ ಪ್ರಾಧಿಕಾರವನ್ನು ಮಾಡಿದ್ದೇವೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ ದಯವಿಟ್ಟು ಈ ವಿಧೇಯಕವನ್ನು ಅನುಮೋದನೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಎಲ್ಲಾ ತಿದ್ದುಪಡಿ ಮಾಡಿದ್ದಾರೆ, ದಯವಿಟ್ಟು ಅದರ ಅನುಮೋದನೆಗೆ ಪ್ರಸ್ತಾವವನ್ನು move ಮಾಡಿ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರನ್ನು ಈ ಸದನದ ಆಡಳಿತ ಪಕ್ಷದ ಸದಸ್ಯರುಗಳನ್ನು ನಮ್ಮ ವಿರೋಧ ಪಕ್ಷದ ಸದಸ್ಯರನ್ನು ಅಭಿನಂದಿಸುತ್ತೇನೆ. ಏಕೆಂದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರ್ಕಾರ ಉಳಿದ ಸದಸ್ಯರುಗಳ ಭಾವನೆಗಳನ್ನು ಅರಿತು ಬಿಲ್ ಅನ್ನು ಹಿಂತೆಗೆದುಕೊಂಡು ಆಗಬೇಕಾದಂಥ ತಿದ್ದುಪಡಿಯೊಂದಿಗೆ ಪುನರ್ ಮಂಡನೆ ಮಾಡಿ, ಎಲ್ಲಾ

ಸದಸ್ಯರುಗಳ ಭಾವನೆಗಳನ್ನು ಗೌರವಿಸಿ, ರಾಜ್ಯದ ಕೆರೆಗಳ ಸಂರಕ್ಷಣೆಯ ಹಿತದೃಷ್ಟಿಯಿಂದ ಈ ಒಳ್ಳೆಯ ಬಿಲ್ ಅನ್ನು ತಂದಿದ್ದೀರಿ, ಅಧ್ಯಕ್ಷರೆ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಅದರಲ್ಲಿ ತಮ್ಮ ಕೊಡುಗೆಯನ್ನು ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ:– ನಾವು ಆ ಬಿಲ್ ವಾಪಸ್ಸು ತೆಗೆದುಕೊಂಡಿಲ್ಲ. Bill ಇದೆ. ತಾವು ಹೇಳಿದ ಎಲ್ಲಾ ಸಲಹೆಗಳನ್ನು ತೆಗೆದುಕೊಂಡು amendment propose ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಆಯಿತು. ನೀವು ಈ ಉದಾರತೆಯನ್ನು ತೋರಿಸಿದ್ದೀರಲ್ಲಾ ಇದು ಈ ವ್ಯವಸ್ಥೆಗೆ ಒಂದು ಗೌರವವನ್ನು ತರುವಂಥದ್ದು. ಈ ವ್ಯವಸ್ಥೆಗೆ ಒಂದು ವಿಶ್ವಾಸವನ್ನು ತರುವಂಥದ್ದು, ಇಲ್ಲವಾದಲ್ಲಿ ನಾವು ಹಾಕಿಕೊಂಡದ್ದೇ ದಾರಿ, ನಾವು ಅದರಲ್ಲಿ ಹೋಗುತ್ತೇವೆ ಎನ್ನುವ ಈ ಹಠದ ಧೋರಣೆಯನ್ನು ತೋರಿಸದೆ ಎಲ್ಲಾ ಸದಸ್ಯರ ಭಾವನೆಗಳನ್ನು ಗೌರವಿಸಿ, ನೀವು ಅಗತ್ಯ ತಿದ್ದುಪಡಿಗಳೊಂದಿಗೆ ತಂದಿರುವುದು ನಿಶ್ಚಿತವಾಗಿ ಸ್ವಾಗತಾರ್ಹವಾದುದು. ಉಳಿದೆಲ್ಲಾ ವಿವರಗಳನ್ನು ಇದರಲ್ಲಿ ಹೇಳಿದ್ದಾರೆ. ಅವೆಲ್ಲವನ್ನು ನಾನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ನನ್ನದೊಂದು ಅಪೇಕ್ಷೆ ಇದೆ. ಏನೆಂದರೆ ಮಾನ್ಯ ಸಚಿವರು ಇದನ್ನು ನೋಡಬೇಕು. ರಾಜ್ಯ ಮಟ್ಟದ ಸಮಿತಿ ಆಗಿದೆ, ಜಿಲ್ಲಾ ಮಟ್ಟದ ಸಮಿತಿ ಆಗಿದೆ, ನಾನು ಅಂದು ಮಾತನಾಡುವಾಗಲೂ ಎರಡು ವಿಷಯಗಳನ್ನು ಹೇಳಿದೆ. ಜಿಲ್ಲಾ ಮಟ್ಟದ ಸಮಿತಿಯಲ್ಲಿ ಜನ ಪ್ರತಿನಿಧಿಗಳಿರುವ ಹಾಗೆ ಮಾಡಿ ಮತ್ತು ಕ್ಷೇತ್ರ ಮಟ್ಟದ ಸಮಿತಿಯನ್ನು ಮಾಡಿ. ನಾವು ಈ ಕೆರೆ ಸಂರಕ್ಷಣೆಗೆ ನಮ್ಮ ಬದ್ಧತೆಯನ್ನು, ಜವಾಬ್ದಾರಿಯನ್ನು ತೋರಿಸುವಂಥ ಒಂದು ಅವಕಾಶಗಳು ಇವು. ಆ ಕೆರೆಗಳು ಒತ್ತುವರಿಯಾಗುವುದಕ್ಕೆ ಅದರಲ್ಲಿ ಏನೇನು ಮಾಡಬೇಕೋ, ಮಾಡಬಾರದು ಅದರಲ್ಲೆಲ್ಲಾ ಶಾಸಕರ ಬೆಂಬಲ ಎಲ್ಲೋ ಪರೋಕ್ಷವಾಗಿ ಇರುತ್ತದೆ ಎಂದು ಶಾಸಕರುಗಳ ಮೇಲೆ ಆರೋಪ ಇದೆ. ನಾವು ಶಾಸಕರು ಹೇಗೆ ಇದ್ದೇವೆಂದು expose ಆಗಲಿ. ನೀವು ನಮ್ಮನ್ನು ಅದರಲ್ಲಿ ಸೇರಿಸಿ, ನಾವು ಏನೇನು ಮಾಡುತ್ತಿದ್ದೇವೆ, ಏನೇನು ಮಾಡುತ್ತಿಲ್ಲ

ಎನ್ನುವುದು ಹೊರಗೆ ಬರಲಿ, ನಾವು ನೀರಿನ ಮೂಲವಿರುವ ಕೆರೆಗಳನ್ನು ಸಂರಕ್ಷಿಸುವಂಥ ಜವಾಬ್ದಾರಿಯೊಳಗೆ ನಾವು ಶಾಸಕರು ಬೇರೆ ರೀತಿಯಲ್ಲಿ ವರ್ತನೆ ಮಾಡಿದ್ದಿದ್ದರೆ ಜನತೆಗೆ ಅದು ಗೊತ್ತಾಗಲಿ,

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅಧ್ಯಕ್ಷರೆ, ನಾವು ಅಂದು ವಿರೋಧ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಮಾತನಾಡಿ ಮುಗಿಸುತ್ತೇನೆ. ನೀವು ಆಮೇಲೆ ಹೇಳಿ. ನಿಮಗೆ ನಿಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಸ್ವಾತಂತ್ರ್ಯ ಇದೆ. ಅಧ್ಯಕ್ಷರೆ ಹಾಗಾಗಿ ನನ್ನ ಅಪೇಕ್ಷೆ ಇರುವುದು ಜಿಲ್ಲಾ ಮಟ್ಟದಲ್ಲಿ ಮತ್ತು ಕ್ಷೇತ್ರ ಮಟ್ಟದಲ್ಲಿ ಈ ಸಮಿತಿಯನ್ನು ಮಾಡುವ ಅಗತ್ಯ ಇದೆ. ಇಲ್ಲವಾದಲ್ಲಿ ಇದರಲ್ಲಿ ಏನಾಗುತ್ತದೆ ಎಂದರೆ ನಮಗೆ ಬೇಕಾದವರಿಂದ ನಮಗೆ ಬೇಕಾದ ಕೆಲಸ ಮಾಡಿಸಿಕೊಳ್ಳುವುದಕ್ಕೆ ನಾವು ಇದ್ದ ಅಧಿಕಾರಿಗಳಿಂದ ಬಳಸಿಕೊಳ್ಳುವುದಕ್ಕೆ ಪ್ರವೃತ್ತಿ ಬರುವುದು ಬೇಡ. ನಾವು expose ಆಗೋಣ. ನಮ್ಮ ಸ್ಪಷ್ಟ ನಿಲುವು ಏನೂ ಎಂಬುದನ್ನು ಸ್ಪಷ್ಟಪಡಿಸುವಂಥ ಒಂದು ನಿರ್ಧಾರವನ್ನು ಸಾರ್ವಜನಿಕವಾಗಿ ತೆಗೆದುಕೊಳ್ಳುವಂಥ ಅವಕಾಶಗಳು ಬರಲಿ. ಈಗೇನಾಗುತ್ತದೆ ಎಂದರೆ ನಾವು ಬೇಡ ಬೇಡ ಎಂದು ಹೇಳುವುದು, ನಮಗೆ ಬೇಕಾಗಿರುವ ತಹಸೀಲ್ದಾರ್, AC, DC ಯವರಿಂದ ಅಲ್ಲಿ ಏನಾಗಬೇಕು ಅದನ್ನು ಮಾಡಿಸುತ್ತೇವೆಂದು ಮುಂದಾಗುವುದು ಈ ರೀತಿ ಸಂದೇಶ ಹೋಗುವುದು ಬೇಡ. ಇದಕ್ಕೆ ನಾವೂ ಕೂಡ ಅಷ್ಟೇ ಜವಾಬ್ದಾರರು, ನಾವು ಜವಾಬ್ದಾರರು ಎನ್ನುವುದು ಹೇಗೆ ಆಗುವುದು ಎಂದರೆ ಈ ಸಮಿತಿಯಲ್ಲಿ ನಮ್ಮ ಪಾತ್ರವಿರಲಿ. ನಮ್ಮ ಪಾತ್ರ ಈ ಸಮಿತಿಯಲ್ಲಿರಲಿ. ಜವಾಬ್ದಾರಿಯನ್ನು ತೋರಿಸಿಕೊಳ್ಳುವುದು ಹೇಗೆ, ಹೊರಗೆ ನಿಂತು ಎಲ್ಲ ಜವಾಬ್ದಾರಿಯನ್ನು ತೋರಿಸುತ್ತೇವೆಂದರೆ ಆಗುವುದಿಲ್ಲ. ಒಳಗಿದ್ದು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂಥ ಆ ಶಕ್ತಿಯನ್ನು ನಾವು ಪಡೆಯುವಂಥವರಾಗಬೇಕು. ಹೀಗಾಗಿ ಈ ವಿಷಯದಲ್ಲಿ ತಾವು ಈ ತಿದ್ದುಪಡಿಯಲ್ಲಿ ಏನೂ ತಂದಿಲ್ಲ, ನಾನು ನಿಮ್ಮಲ್ಲಿ, ಮಾನ್ಯ ಅಧ್ಯಕ್ಷರಲ್ಲಿ ಮತ್ತು ಸರ್ಕಾರಕ್ಕೆ ಮನವಿ

ಮಾಡಿಕೊಳ್ಳುತ್ತೇನೆ, ಇದರೊಳಗೆ ನೀವು ಈ ತಿದ್ದುಪಡಿಯೊಂದಿಗೂ ಸಹ ಈ ಬಿಲ್‌ನ್ನು ಸ್ವೀಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಈಗ ಶಾಸಕರನ್ನು ಆ ಸಮಿತಿಯಲ್ಲಿ ಹಾಕಿದರೆ, ಈಗಾಗಲೇ ಹತ್ತಾರು ವರ್ಷಗಳಿಂದ, ನೂರಾರು ವರ್ಷಗಳಿಂದ ಒತ್ತುವರಿ ಮಾಡಿಕೊಂಡು ತೆಂಗಿನ ಮರಗಳನ್ನಾಗಲಿ, ಬೇರೆ ಬೆಳೆಗಳನ್ನಾಗಲಿ ಬೆಳೆದು ಬಹಳ ಮಟ್ಟಿಗೆ ರೈತರು ಸಂಕಷ್ಟದಲ್ಲಿದ್ದಾರೆ. ಈಗ ನಾವು ಬಿಡಿಸಬೇಕೆಂದು ಹೋದರೆ ಇಲ್ಲಿ ಏನು ಮಾಡುತ್ತಾರೆ ನಮಗೆ ಆಗದಂಥವರು, ರಾಜಕೀಯ ವೈರಿಗಳು ಇದ್ದೇ ಇರುತ್ತಾರೆ, ನೋಡಯ್ಯಾ ಎಂ.ಎಲ್.ಎ. ಆ ಸಮಿತಿ ಅಧ್ಯಕ್ಷನಾಗಿ ಕಾನೂನು ತಂದು ಈಗ ನಿಮ್ಮನ್ನೆಲ್ಲಾ, ಮರವನ್ನೆಲ್ಲಾ ಕಡಿಸುತ್ತಿದ್ದಾನೆ ಎನ್ನತಕ್ಕಂಥ ದೂಷಣೆಯನ್ನು ತಂದು ನಮಗೆ ನಿಜವಾಗಿಯೂ ಕೆಟ್ಟ ಹೆಸರು ಬರುತ್ತದೆ. ಆದುದರಿಂದ ಅಧಿಕಾರಿಗಳ ಮುಖಾಂತರವೇ ಒಳ್ಳೆಯ ಕೆಲಸವನ್ನು ಮಾಡಿಸೋಣ. ದಯಮಾಡಿ ಇದು ನನ್ನ ಅಭಿಪ್ರಾಯ ಮತ್ತು ಬಹಳ ಶಾಸಕರ ಅಭಿಪ್ರಾಯವೂ ಹೌದು. ನೀವು ಬೇಕಾದರೆ ಬೇರೆ ಶಾಸಕರುಗಳನ್ನೂ ಕೂಡ ಕೇಳಿನೋಡಿ. ನಮ್ಮ ಕಾಗೇರಿಯವರೊಬ್ಬರನ್ನು ಬಿಟ್ಟರೆ ಬಿ.ಜೆ.ಪಿ. ಪಕ್ಷದಲ್ಲಿಯೂ ಕೂಡ ಯಾರೂ ಒಪ್ಪಿಕೊಳ್ಳುವುದಿಲ್ಲವೆಂದು ಕಾಣುತ್ತದೆ. ಏಕೆಂದರೆ ಅವರ ಕಡೆ ಇರುವ ಕೆರೆಗಳು ಒತ್ತುವರಿಯಾಗದೇ ಇರಬಹುದು. ಆದುದರಿಂದ ನಾವು ಶಾಸಕರನ್ನು ಸಮಿತಿಗೆ ಹಾಕುವುದಕ್ಕೆ ವಿರೋಧವಿದ್ದೇವೆಂದು ಹೇಳುತ್ತೇವೆ. ಕಡೇಪಕ್ಷ ಜಲಸಂರಕ್ಷಣೆಗೆ ನಮ್ಮ ಇವರು ಸೇರಿಕೊಂಡಿದ್ದರು. ನಾವು ಜಲ ಸಂರಕ್ಷಣೆಯಲ್ಲಿ ಅವರಿಲ್ಲ ಎಂದು ತಿಳಿದುಕೊಂಡು ಅವರ ಬಗ್ಗೆ ಒಬ್ಬರೂ ಚರ್ಚೆಯಲ್ಲಿ ಮಾತನಾಡಲಿಲ್ಲ. ಆದರೆ ಈಗ ಬಿಲ್ ಅನ್ನು ತಂದಿದ್ದಾರೆ. ಮಾನ್ಯ ಕಾಗೇರಿಯವರು ಹೇಳಿದ ಹಾಗೆ ನಿಜವಾಗಿಯೂ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ರೀತಿ ಬಿಲ್‌ಗಳನ್ನು ತರಬೇಕು. ಅದೇ ರೀತಿ ತಂದಿದ್ದೀರಿ. ಅದಕ್ಕೋಸ್ಕರ ಆ ಬಿಲ್‌ನ್ನು ಪಾಸ್ ಮಾಡಬಹುದು. ಮತ್ತೆ ಯಾವುದೇ ಆಕ್ಷೇಪಣೆಯಿಲ್ಲವೆಂದು ಹೇಳಿ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಏನು ಹೇಳಿದರೋ ಅದು ನಿಜವಾಗಿಯೂ ಎಲ್ಲಾ ಶಾಸಕರು ಅದನ್ನು ಬೇಡವೆನ್ನುವ ಮಾತನ್ನು ಹೇಳಿದ್ದಾರೆ. ಇನ್ನು ಈ ಬಿಲ್ ಬಗ್ಗೆ ಅವರು ಪ್ರಶಂಸೆಯನ್ನು ಮಾಡಿದ್ದಾರೆ. ನಿಶ್ಚಿತವಾಗಿಯೂ ನಮ್ಮ ಸರ್ಕಾರಕ್ಕೆ ಕಮಿಟ್‌ಮೆಂಟ್ ಇದೆ. ನಾವು ಮೊಂಡುತನ ಧೋರಣೆಯನ್ನು ಮಾಡದೆ ನಿಮ್ಮೆಲ್ಲರ ಸಲಹೆಗಳನ್ನು ತೆಗೆದುಕೊಂಡು, ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಪ್ರತಿಯೊಬ್ಬರ ಸಲಹೆ ಮೇರೆ ಈ ಬಿಲ್ ತಿದ್ದುಪಡಿಯೊಂದಿಗೆ ತಂದಿದ್ದೇನೆ. ಈ ಬಿಲ್ ಕೇವಲ ಬಿಲ್ ಆಗಿ ಉಳಿಯಬಾರದು. ಈ ಬಿಲ್ ಯಶಸ್ವಿಯಾಗಬೇಕು. ಬಹಳಷ್ಟು ಜನ ಮಾತನಾಡುವಾಗ ಹಲ್ಲು ಇಲ್ಲದ ಬಿಲ್, ಹಲ್ಲು ಇರಲಾರದ ವಿಧೇಯಕ ಎನ್ನುವ ಮಾತನ್ನು ಹೇಳಿದರು. ಇದು ಹಲ್ಲಿರಲಾರದ್ದು ಅಲ್ಲ, ಹಲ್ಲು ಇದೆ, ಉಗುರೂ ಕೂಡ ಇದೆ. ಆ ರೀತಿಯ ವಿಧೇಯಕವನ್ನು ನಾವು ತಂದಿದ್ದೇವೆ. ನಿಶ್ಚಿತವಾಗಿಯೂ ಮುಂದಿನ ದಿನಮಾನಗಳಲ್ಲಿ ನಮ್ಮ ಇಲಾಖೆ ಕೆರೆಗಳ ರಕ್ಷಣೆ ವಿಚಾರದೊಳಗೆ ಒಂದು ದಿಟ್ಟತನವನ್ನು ತೋರಿಸುತ್ತೇವೆ. ನಮ್ಮ ಮುಖ್ಯಮಂತ್ರಿಗಳು ಏನೊಂದು ದಿಟ್ಟತನದ ನಿರ್ಧಾರವನ್ನು ತೆಗೆದುಕೊಂಡು ಈ ವಿಧೇಯಕವನ್ನು ತಂದಿದ್ದಾರೋ ಇದನ್ನು ದಯಮಾಡಿ ತಾವು ಪಾಸ್ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಈಗ ಕಾಗೇರಿಯವರು ಏನು ಸಲಹೆಯನ್ನು ಕೊಟ್ಟಿದ್ದಾರೋ ಅದನ್ನು ಗಮನದಲ್ಲಿಟ್ಟುಕೊಳ್ಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮುಂದಿನ ದಿನಮಾನಗಳಲ್ಲಿ ಅದರ ಬಗ್ಗೆ ನೋಡೋಣ.

ಅಧ್ಯಕ್ಷರು:– ಓ.ಕೆ.,

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

"2014 ನೇ ಸಾಲಿನ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುವುದು

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 1 ರಿಂದ 3 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 1 ರಿಂದ 3 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ

ದೀರ್ಘ ಶೀರ್ಷಿಕೆ

ಸದರಿ ವಿಧೇಯಕದ ಶೀರ್ಷಿಕೆಯಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವನೆ

ಸದರಿ ವಿಧೇಯಕದ ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯಲ್ಲಿ "ಕೆರೆ" ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ "ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಖಂಡ–1

ಸದರಿ ವಿಧೇಯಕದ 1 ನೇ ಖಂಡದಲ್ಲಿ:–

(i) (1) ನೇ ಉಪಖಂಡದಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು:

(ii) (3)ನೇ ಉಪಖಂಡದಲ್ಲಿ "ಅಥವಾ ಯಾವುದೇ ಅಧಿಸೂಚಿಸಿದ ಇತರ ನಿಕಾಯಗಳ" ಎಂಬ ಪದಗಳಿಗೆ "ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಯವುದೇ ಇತರ ಜಲಕಾಯಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಖಂಡ–2

ಸದರಿ ವಿಧೇಯಕದ 2ನೇ ಖಂಡದ (1) ನೇ ಉಪಖಂಡದಲ್ಲಿ:–

(i) (ಬಿ) ಬಾಬಿನಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಜಿ) ಬಾಬಿನಲ್ಲಿ "ಜಲಾನಯನ ಪ್ರದೇಶಗಳನ್ನು" ಎಂಬ ಪದಗಳ ತರುವಾಯ "ರಾಜಕಾಲುವೆ ಮುಖ್ಯ ಒಳಹರಿವು (main feeder) ಮತ್ತು ಇತರ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಧ್ಯಾಯ–II

ಸದರಿ ವಿಧೇಯಕದ ಅಧ್ಯಾಯ–II ರ ಶೀರ್ಷಿಕೆಯಲ್ಲಿ "ಕೆರೆ" ಎಂಬ ಪದದ ತರುವಾಯ

"ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು:–

ಖಂಡ–3

ಸದರಿ ವಿಧೇಯಕದ 3ನೇ ಖಂಡದಲ್ಲಿ:–

(i) (1)ನೇ ಉಪಖಂಡದಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (3)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(3) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಸಣ್ಣನೀರಾವರಿ ಸಚಿವರು ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು	
(ಬಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ	ಸದಸ್ಯರು
(ಸಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಅಥವಾ ಅಪರ ಕಾರ್ಯದರ್ಶಿ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ	ಸದಸ್ಯರು
(ಡಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ	ಸದಸ್ಯರು
(ಇ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು

(ಎಫ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	ಸದಸ್ಯರು
(ಜಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	ಸದಸ್ಯರು
(ಹೆಚ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ	ಸದಸ್ಯರು
(ಐ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	ಸದಸ್ಯರು
(ಜೆ)	ಮುಖ್ಯ ಅಭಿಯಂತರರು, ದಕ್ಷಿಣ (ಸಣ್ಣ ನೀರಾವರಿ) ಬೆಂಗಳೂರು	ಸದಸ್ಯರು
(ಕೆ)	ಪರಿಸರ ಮತ್ತು ಜೀವಿಶಾಸ್ತ್ರ ಅಥವಾ ಕೆರೆ ಅಥವಾ ಸರೋವರ ಸಂರಕ್ಷಣೆ ಕ್ಷೇತ್ರದಲ್ಲಿ ತಜ್ಞರಾದವರ ಪೈಕಿಯಿಂದ ಸರ್ಕಾರವು ನೇಮಕ ಮಾಡಿದ ನಾಲ್ಕು ಅಧಿಕಾರೇತರ ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆ ಇರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಜಾತಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು, ಮತ್ತು ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು,	ಅಧಿಕಾರೇತರ ಸದಸ್ಯರು
(ಎಲ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಣ್ಣ ನೀರಾವರಿ	ಸದಸ್ಯ ಕಾರ್ಯದರ್ಶಿ, ಪ್ರಾಧಿಕಾರದ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ

(iii) (6)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(6) ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ರಾಜ್ಯ ಪ್ರಾಧಿಕಾರದ ನಿರ್ಣಯವನ್ನು ಕಾಲಕಾಲಕ್ಕೆ ಕಾರ್ಯಗತಗೊಳಿಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ	ಅಧ್ಯಕ್ಷರು
(ಬಿ)	ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ	ಉಪಾಧ್ಯಕ್ಷರು
(ಸಿ)	ಸಂಬಂಧಿಸಿದ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸ್ ಅಧೀಕ್ಷಕರು	ಸದಸ್ಯ
(ಡಿ)	ಜಂಟಿ ನಿರ್ದೇಶಕರು ಕೃಷಿ ಇಲಾಖೆ (ಮಣ್ಣು ಸಂರಕ್ಷಣೆ)	ಸದಸ್ಯ
(ಇ)	ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು	ಸದಸ್ಯ
(ಎಫ್)	ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ	ಸದಸ್ಯ
(ಜಿ)	ಸಂಬಂಧಪಟ್ಟ ಜಿಲ್ಲೆಯ ಹಿರಿಯ ಭೂಗರ್ಭಶಾಸ್ತ್ರಜ್ಞ	ಸದಸ್ಯ
(ಹೆಚ್)	ಸಂಬಂಧಪಟ್ಟ ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು	ಸದಸ್ಯ
(ಐ)	ಸಂಬಂಧಪಟ್ಟ ಜಿಲ್ಲೆಯ ಪ್ರಭಾರದಲ್ಲಿರುವ ಸಣ್ಣ ನೀರಾವರಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು	ಸದಸ್ಯ

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

ದೀರ್ಘ ಶೀರ್ಷಿಕೆ

ಸದರಿ ವಿಧೇಯಕದ ಶೀರ್ಷಿಕೆಯಲ್ಲಿ **"ಕೆರೆ"** ಎಂಬ ಪದದ ತರುವಾಯ **"ಸಂರಕ್ಷಣೆ ಮತ್ತು"** ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವನೆ

ಸದರಿ ವಿಧೇಯಕದ ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯಲ್ಲಿ **"ಕೆರೆ"** ಎಂಬ ಪದಗಳು ಬರುವ ಎರಡು ಕಡೆಗಳಲ್ಲಿ **"ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಖಂಡ–1

ಸದರಿ ವಿಧೇಯಕದ 1 ನೇ ಖಂಡದಲ್ಲಿ:–

(i) (1) ನೇ ಉಪಖಂಡದಲ್ಲಿ **"ಕೆರೆ"** ಎಂಬ ಪದದ ತರುವಾಯ **"ಸಂರಕ್ಷಣೆ ಮತ್ತು"** ಎಂಬ ಪದಗಳನ್ನು ಸೇರಿಸತಕ್ಕದ್ದು:

(ii) (3)ನೇ ಉಪಖಂಡದಲ್ಲಿ **"ಅಥವಾ ಯಾವುದೇ ಅಧಿಸೂಚಿಸಿದ ಇತರ ನಿಕಾಯಗಳ"** ಎಂಬ ಪದಗಳಿಗೆ **"ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಇತರ ಜಲಕಾಯಗಳ"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಖಂಡ–2

ಸದರಿ ವಿಧೇಯಕದ 2ನೇ ಖಂಡದ (1) ನೇ ಉಪಖಂಡದಲ್ಲಿ:–

(i) (ಬಿ) ಬಾಬಿನಲ್ಲಿ **"ಕೆರೆ"** ಎಂಬ ಪದದ ತರುವಾಯ **"ಸಂರಕ್ಷಣೆ ಮತ್ತು"** ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಜಿ) ಬಾಬಿನಲ್ಲಿ "ಜಲಾನಯನ ಪ್ರದೇಶಗಳನ್ನು" ಎಂಬ ಪದಗಳ ತರುವಾಯ "ರಾಜಕಾಲುವೆ ಮುಖ್ಯ ಒಳಹರಿವು (main feeder) ಮತ್ತು ಇತರ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಧ್ಯಾಯ–II

ಸದರಿ ವಿಧೇಯಕದ ಅಧ್ಯಾಯ–II ರ ಶೀರ್ಷಿಕೆಯಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು:–

ಖಂಡ–3

ಸದರಿ ವಿಧೇಯಕದ 3ನೇ ಖಂಡದಲ್ಲಿ:–

(i) (1)ನೇ ಉಪಖಂಡದಲ್ಲಿ "ಕೆರೆ" ಎಂಬ ಪದದ ತರುವಾಯ "ಸಂರಕ್ಷಣೆ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (3)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(3) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಸಣ್ಣನೀರಾವರಿ ಸಚಿವರು ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು	
(ಬಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ	ಸದಸ್ಯರು
(ಸಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಅಥವಾ ಅಪರ ಕಾರ್ಯದರ್ಶಿ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ	ಸದಸ್ಯರು
(ಡಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ	ಸದಸ್ಯರು

(ಇ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
(ಎಫ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	ಸದಸ್ಯರು
(ಜಿ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	ಸದಸ್ಯರು
(ಹೆಚ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ	ಸದಸ್ಯರು
(ಐ)	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	ಸದಸ್ಯರು
(ಜೆ)	ಮುಖ್ಯ ಅಭಿಯಂತರರು, ದಕ್ಷಿಣ (ಸಣ್ಣ ನೀರಾವರಿ) ಬೆಂಗಳೂರು	ಸದಸ್ಯರು
(ಕೆ)	ಪರಿಸರ ಮತ್ತು ಜೀವಿಶಾಸ್ತ್ರ ಅಥವಾ ಕೆರೆ ಅಥವಾ ಸರೋವರ ಸಂರಕ್ಷಣೆ ಕ್ಷೇತ್ರದಲ್ಲಿ ತಜ್ಞರಾದವರ ಪೈಕಿಯಿಂದ ಸರ್ಕಾರವು ನೇಮಕ ಮಾಡಿದ ನಾಲ್ಕು ಅಧಿಕಾರೇತರ ಸದಸ್ಯರು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆ ಇರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಜಾತಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು, ಮತ್ತು ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು,	ಅಧಿಕಾರೇತರ ಸದಸ್ಯರು
(ಎಲ್)	ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಸಣ್ಣ ನೀರಾವರಿ	ಸದಸ್ಯ ಕಾರ್ಯದರ್ಶಿ, ಪ್ರಾಧಿಕಾರದ ಪದನಿಮಿತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ

(iii) (6)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(6) ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ರಾಜ್ಯ ಪ್ರಾಧಿಕಾರದ ನಿರ್ಣಯವನ್ನು ಕಾಲಕಾಲಕ್ಕೆ ಕಾರ್ಯಗತಗೊಳಿಸತಕ್ಕದ್ದು. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಕಾರ್ಯನಿರ್ವಹಣಾ ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ)	ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿ	ಅಧ್ಯಕ್ಷರು
(ಬಿ)	ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ	ಉಪಾಧ್ಯಕ್ಷರು
(ಸಿ)	ಸಂಬಂಧಿಸಿದ ಜಿಲ್ಲೆಯ ಪ್ರಭಾರದಲ್ಲಿರುವ ಪೊಲೀಸ್ ಅಧೀಕ್ಷಕರು	ಸದಸ್ಯ
(ಡಿ)	ಜಂಟಿ ನಿರ್ದೇಶಕರು ಕೃಷಿ ಇಲಾಖೆ (ಮಣ್ಣು ಸಂರಕ್ಷಣೆ)	ಸದಸ್ಯ
(ಇ)	ಸಂಬಂಧಪಟ್ಟ ಜಿಲ್ಲೆಯ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು	ಸದಸ್ಯ
(ಎಫ್)	ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ	ಸದಸ್ಯ
(ಜಿ)	ಸಂಬಂಧಪಟ್ಟ ಜಿಲ್ಲೆಯ ಹಿರಿಯ ಭೂಗರ್ಭಶಾಸ್ತ್ರಜ್ಞ	ಸದಸ್ಯ
(ಹೆಚ್)	ಸಂಬಂಧಪಟ್ಟ ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು	ಸದಸ್ಯ
(ಐ)	ಸಂಬಂಧಪಟ್ಟ ಜಿಲ್ಲೆಯ ಪ್ರಭಾರದಲ್ಲಿರುವ ಸಣ್ಣ ನೀರಾವರಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರು	ಸದಸ್ಯ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ರಿಂದ 3 ತಿದ್ದುಪಡಿಯಾದ ರೀತಿಯಲ್ಲಿ:–

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 1ರಿಂದ 3 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 1 ರಿಂದ 3 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4

ಅಧ್ಯಕ್ಷರು:– "ಖಂಡ 4 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರೆತಿದೆ

(ಖಂಡ 4 ವಿಧೇಯಕದ ಅಂಗವಾದವು)

ಖಂಡ 5

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 5ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 5 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 5 ನೇ ಖಂಡದಲ್ಲಿ,

(iii) (5) ನೇ ಉಪಖಂಡದಲ್ಲಿ, "ಸಿದ್ಧಪಡಿಸುವುದು" ಎಂಬ ಪದದ ತರುವಾಯ "ಹಾಗೂ ಕೆರೆಗಳ ವೆಚ್ಚ ಮತ್ತು ಅಭಿವೃದ್ಧಿಯನ್ನು ಮೇಲ್ವಿಚಾರಿಸುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು;

(iv) (6) ನೇ ಉಪಖಂಡದಲ್ಲಿ, "ಪ್ರಭಾವದ ಮುಖಾಂತರ" ಎಂಬ ಪದದ ತರುವಾಯ "ಕೆರೆಯ ಹೂಳನ್ನು ತೆಗೆಯುವುದು ಹಾಗೂ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

ಸದರಿ ವಿಧೇಯಕದ 5 ನೇ ಖಂಡದಲ್ಲಿ,

(iii) (5) ನೇ ಉಪಖಂಡದಲ್ಲಿ, "ಸಿದ್ಧಪಡಿಸುವುದು" ಎಂಬ ಪದದ ತರುವಾಯ "ಹಾಗೂ ಕೆರೆಗಳ ವೆಚ್ಚ ಮತ್ತು ಅಭಿವೃದ್ಧಿಯನ್ನು ಮೇಲ್ವಿಚಾರಿಸುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು;

(iv) (6) ನೇ ಉಪಖಂಡದಲ್ಲಿ, "ಪ್ರಭಾವದ ಮುಖಾಂತರ" ಎಂಬ ಪದದ ತರುವಾಯ "ಕೆರೆಯ ಹೂಳನ್ನು ತೆಗೆಯುವುದು ಹಾಗೂ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 5 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 5 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 6

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 6 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ ಖಂಡ 6 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

6 ನೇ ಖಂಡದಲ್ಲಿ, (6) ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:–

"(7) ಕೆರೆಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಇತರ ಪ್ರಕಾರ್ಯಗಳನ್ನು ನೆರವೇರಿಸಲು ನೀರಿನ ಬಳಕೆದಾರರ ಸೊಸೈಟಿ ಅಥವಾ ಸಂಘವನ್ನೂ ಒಳಗೊಂಡಂತೆ, ಯಾವುದೇ ಇಲಾಖೆಯ ಹೆಸರಿಸಲಾದ ಅಧಿಕಾರಿಗೆ ಅಥವಾ ಇತರ ಯಾವೊಬ್ಬ ಅಧಿಕಾರಿಗೆ ನಿರ್ದೇಶನ ನೀಡುವುದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

6 ನೇ ಖಂಡದಲ್ಲಿ, (6) ನೇ ಉಪಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದು. ಎಂದರೆ:–

"(7) ಕೆರೆಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನೊಳಿಸಲು ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಇತರ ಪ್ರಕಾರ್ಯಗಳನ್ನು ನೆರವೇರಿಸಲು ನೀರಿನ ಬಳಕೆದಾರರ ಸೊಸೈಟಿ ಅಥವಾ ಸಂಘವನ್ನೂ ಒಳಗೊಂಡಂತೆ, ಯಾವುದೇ ಇಲಾಖೆಯ ಹೆಸರಿಸಲಾದ ಅಧಿಕಾರಿಗೆ ಅಥವಾ ಇತರ ಯಾವೊಬ್ಬ ಅಧಿಕಾರಿಗೆ ನಿರ್ದೇಶನ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:–

"ಖಂಡ 6 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 6 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7 ರಿಂದ 9

ಅಧ್ಯಕ್ಷರು:– "ಖಂಡ 7 ರಿಂದ 9 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 7 ರಿಂದ 9 ವಿಧೇಯಕದ ಅಂಗವಾದವು)

ಖಂಡ 10

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 10 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 10 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 10 ನೇ ಖಂಡದ (2) ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಳ ಬಗ್ಗೆ ಯಾವೊಬ್ಬ ವ್ಯಕ್ತಿಯಿಂದ ದೂರುಗಳನ್ನು ಸ್ವೀಕರಿಸಲು ಹೆಸರಿಸಲಾದ ಅಧಿಕಾರಿಯು ಸಹ ಸಕ್ಷಮನಾಗಿರತಕ್ಕದ್ದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

ಸದರಿ ವಿಧೇಯಕದ 10 ನೇ ಖಂಡದ (2) ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಳ ಬಗ್ಗೆ ಯಾವೊಬ್ಬ ವ್ಯಕ್ತಿಯಿಂದ ದೂರುಗಳನ್ನು ಸ್ವೀಕರಿಸಲು ಹೆಸರಿಸಲಾದ ಅಧಿಕಾರಿಯು ಸಹ ಸಕ್ಷಮನಾಗಿರತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ:–

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:–

"ಖಂಡ 10 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 10 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 11 ರಿಂದ 13

ಅಧ್ಯಕ್ಷರು:– "ಖಂಡ 11 ರಿಂದ 13 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 11 ರಿಂದ 13 ವಿಧೇಯಕದ ಅಂಗವಾದವು)

ಖಂಡ 14

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 14 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 14 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 14 ನೇ ಖಂಡದ (2) ನೇ ಉಪಖಂಡದ ಪರಂತುಕದಲ್ಲಿ

"ಜಿಲ್ಲಾಧಿಕಾರಿಯವರಿಗೆ" ಎಂಬ ಪದಕ್ಕೆ "ಪ್ರಾಧಿಕೃತ ಅಧಿಕಾರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

ಸದರಿ ವಿಧೇಯಕದ 14 ನೇ ಖಂಡದ (2) ನೇ ಉಪಖಂಡದ ಪರಂತುಕದಲ್ಲಿ

"ಜಿಲ್ಲಾಧಿಕಾರಿಯವರಿಗೆ" ಎಂಬ ಪದಕ್ಕೆ "ಪ್ರಾಧಿಕೃತ ಅಧಿಕಾರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 14 ತಿದ್ದುಪಡಿಯಾದ ರೀತಿಯಲ್ಲಿ:–

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:–

"ಖಂಡ 14 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 14 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 15 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 15 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 15 ನೇ ಖಂಡದಲ್ಲಿ "ಜಿಲ್ಲಾಧಿಕಾರಿಯು" ಎಂಬ ಪದಕ್ಕೆ "ಪ್ರಾಧಿಕೃತ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 15 ನೇ ಖಂಡದಲ್ಲಿ "ಜಿಲ್ಲಾಧಿಕಾರಿಯು" ಎಂಬ ಪದಕ್ಕೆ "ಪ್ರಾಧಿಕೃತ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 15 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ:–

"ಖಂಡ 15 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 15 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 16 ರಿಂದ 17

ಅಧ್ಯಕ್ಷರು:– "ಖಂಡ 16 ಮತ್ತು 17 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 16 ರಿಂದ 17 ವಿಧೇಯಕದ ಅಂಗವಾದವು)

ಖಂಡ 18

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 18 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 18 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 18 ನೇ ಖಂಡದಲ್ಲಿ "14ನೇ ಪ್ರಕರಣದ" ಎಂಬ ಪದಗಳಿಗೆ "16ನೇ ಪ್ರಕರಣದ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 18 ನೇ ಖಂಡದಲ್ಲಿ "14ನೇ ಪ್ರಕರಣದ" ಎಂಬ ಪದಗಳಿಗೆ "16ನೇ ಪ್ರಕರಣದ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 18 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 18 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 18 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 19 ರಿಂದ 21

ಅಧ್ಯಕ್ಷರು:– "ಖಂಡ 19 ರಿಂದ 21 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 19 ರಿಂದ 21 ವಿಧೇಯಕದ ಅಂಗವಾದವು)

ಖಂಡ 22

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 22 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 22 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 22 ನೇ ಖಂಡದ (5) ನೇ ಉಪಖಂಡದಲ್ಲಿ, "ಅಂಥ ಪ್ರಾಧಿಕಾರಕ್ಕೆ" ಎಂಬ ಪದಗಳಿಗೆ "ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 22 ನೇ ಖಂಡದ (5) ನೇ ಉಪಖಂಡದಲ್ಲಿ, "ಅಂಥ ಪ್ರಾಧಿಕಾರಕ್ಕೆ" ಎಂಬ ಪದಗಳಿಗೆ "ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 22 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 22 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 22 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 23 ರಿಂದ 34

ಅಧ್ಯಕ್ಷರು:– "ಖಂಡ 23 ರಿಂದ 34 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 23 ರಿಂದ 34 ವಿಧೇಯಕದ ಅಂಗವಾದವು)

ಖಂಡ 35

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 35 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 35 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 35 ನೇ ಖಂಡದ (2) ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಪ್ರಾಧಿಕಾರವು, ನಿಧಿಯನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಯೋಜನೆ ಅಥವಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಜಿಲ್ಲಾ ಕಾರ್ಯನಿರ್ವಾಹಕ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಬಹುದು."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 35 ನೇ ಖಂಡದ (2) ನೇ ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಪ್ರಾಧಿಕಾರವು, ನಿಧಿಯನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಯೋಜನೆ ಅಥವಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಜಿಲ್ಲಾ ಕಾರ್ಯನಿರ್ವಾಹಕ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಬಹುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 35 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 35 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 35 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 36 ರಿಂದ 40

ಅಧ್ಯಕ್ಷರು:– "ಖಂಡ 36 ರಿಂದ 40 ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

(ಖಂಡ 36 ರಿಂದ 40 ವಿಧೇಯಕದ ಅಂಗವಾದವು)

ಖಂಡ 41

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 41 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 41 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 41 ನೇ ಖಂಡದಲ್ಲಿ "ಇತರ ಪ್ರಾಧಿಕಾರದ" ಎಂಬ ಪದಗಳ ತರುವಾಯ "ಅಥವಾ ನೀರಿನ ಬಳಕೆದಾರರ ಸೊಸೈಟಿ ಅಥವಾ ಸಂಘದ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 41 ನೇ ಖಂಡದಲ್ಲಿ "ಇತರ ಪ್ರಾಧಿಕಾರದ" ಎಂಬ ಪದಗಳ ತರುವಾಯ "ಅಥವಾ ನೀರಿನ ಬಳಕೆದಾರರ ಸೊಸೈಟಿ ಅಥವಾ ಸಂಘದ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 41 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 41 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 41 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 42

ಅಧ್ಯಕ್ಷರು:– ಮಾನ್ಯ ಸಚಿವರು ಖಂಡ 42 ಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 42 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದ 42 ನೇ ಖಂಡದಲ್ಲಿ "16 ನೇ ಪ್ರಕರಣದ" ಎಂಬ ಪದಗಳಿಗೆ "15 ಮತ್ತು 16ನೇ ಪ್ರಕರಣಗಳ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

ಸದರಿ ವಿಧೇಯಕದ 42 ನೇ ಖಂಡದಲ್ಲಿ "16 ನೇ ಪ್ರಕರಣದ" ಎಂಬ ಪದಗಳಿಗೆ "15 ಮತ್ತು 16ನೇ ಪ್ರಕರಣಗಳ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 42 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಖಂಡ 42 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರಬೇಕು ಎಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರೆತಿದೆ

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 42 ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ತಿದ್ದುಪಡಿಯಾದ ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು:– "ತಿದ್ದುಪಡಿಯಾದ ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದೆ ಇರುವ ವಿಷಯ"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

(ತಿದ್ದುಪಡಿಯಾದ ಪ್ರಥಮ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು)

ವಿಧೇಯಕದ ಅಂಗೀಕಾರ

ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, 2014 ನೇ ಸಾಲಿನ ಕರ್ನಾಟಕ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿಯಾದಂತೆ ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ, "2014ನೇ ಸಾಲಿನ ಕರ್ನಾಟ ಕೆರೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿಯಾದಂತೆ ಈ ಸಭೆಯು ಅಂಗೀಕರಿಸಬೇಕು."

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು

ವಿಧೇಯಕಕ್ಕೆ ತಿದ್ದುಪಡಿಯಾದಂತೆ ಅನುಮೋದನೆ ದೊರೆಯಿತು

(ಅನುಬಂಧ–1)

ಅಧ್ಯಕ್ಷರು:– ಈಗ ನಿಯಮ 69 ರ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಕುಮಾರಸ್ವಾಮಿಯವರೆ, ಸರ್ಕಾರಿ ಕೆರೆಗಳ ಒತ್ತುವರಿಯಾಗಿರುವ ಬಗ್ಗೆ ಚರ್ಚೆಗೆ ಅವಕಾಶ ಕೇಳಿದ್ದಿರಿ. ಈಗ ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಕಸದ ವಿಚಾರ ಮತ್ತು ಸರ್ಕಾರಿ ಕೆರೆಗಳ ಒತ್ತವರಿಯಾಗಿರುವ, ಈ ಎರಡೂ ವಿಚಾರಗಳ ಬಗ್ಗೆ ಮಾತನಾಡಲು ನನಗೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಆಯಿತು. ಕಾರಜೋಳರವರೆ, ನೀವು ಕೊಟ್ಟಿರುವ ವಿಷಯದ ಬಗ್ಗೆ ಮಾತನಾಡುತ್ತೀರ?

ಶ್ರೀ ಗೋವಿಂದ ಎಂ. ಕಾರಜೋಳ್:– ಮಾನ್ಯ ಅಧ್ಯಕ್ಷರೆ, ಈಗ ಸಮಾಜ ಕಲ್ಯಾಣ ಸಚಿವರು ಸದನದಲ್ಲಿಲ್ಲ. ಅವರಿಲ್ಲದೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು:– ಹಾಗಾದರೆ ಒಂದು ಕೆಲಸ ಮಾಡೋಣ. ನಾಳೆ ಹೇಗಿದ್ದರೂ ಸಮಾಜ ಕಲ್ಯಾಣ ಇಲಾಖೆ ಬೇಡಿಕೆ ಮೇಲೆ ಚರ್ಚೆಯಿದೆಯಲ್ಲಾ. ಅದರಲ್ಲಿಯೇ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ್:– ಅದರಲ್ಲಿ ಮಾತನಾಡುವುದಕ್ಕಿಂತ ಈ ವಿಚಾರಕ್ಕೇ ಪ್ರತ್ಯೇಕವಾಗಿ ಚರ್ಚೆ ಮಾಡಲು ಅವಕಾಶ ಕೊಡಿ. ಏಕೆಂದರೆ ಸಮಸ್ಯೆಗಳು ಬೇರೆ ಬೇರೆ ಇವೆ.

ಅಧ್ಯಕ್ಷರು:– ಆಯಿತು. ಈಗ ಉನ್ನತ ಶಿಕ್ಷಣ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಉನ್ನತ ಶಿಕ್ಷಣ ಸಚಿವರಾದ ದೇಶಪಾಂಡೆಯವರು ಗೋವಾಕ್ಕೆ ಹೋಗಿದ್ದರು. ಅಲ್ಲಿ ಕನ್ನಡಿಗರ ಮೇಲೆ ಹಲ್ಲೆಯಾಗುತ್ತದೆ ಎನ್ನುವ ಸುದ್ದಿ ತಿಳಿದು, ಸಚಿವರು ಗೋವಾಕ್ಕೆ ಹೋಗಿ ಅವರ ಜೊತೆ ಮಾತನಾಡಿಕೊಂಡು ಬಂದಿದ್ದಾರೆ. ಈಗ ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ.

9. ಮಾನ್ಯ ಸಚಿವರ ಹೇಳಿಕೆ

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಎರಡೂ ಸದನದ ಗೌರವಾನ್ವಿತ ಸದಸ್ಯರು ದಿನಾಂಕ 11–07–2014 ರಂದು ಭಾರಿ ಮಳೆಯಲ್ಲಿ ಗೋವಾದ ಬೈನಾ ಬೀಚ್ ವಾಸ್ಕೋ ಸಮೀಪದಲ್ಲಿ 75 ಮನೆಗಳು, ಅದರಲ್ಲಿ ಕನ್ನಡಿಗರ ಮನೆಗಳೂ ಇದ್ದವು, ಉತ್ತರ ಪ್ರದೇಶದ ವಾಸಿಗಳ ಮನೆಗಳು ಇದ್ದವು, ಒಬ್ಬರದ್ದು ಗೋವಾದವರದು ಮನೆಯಿತ್ತು. ಅದನ್ನು ನೆಲಸಮ ಮಾಡಿದ ಬಗ್ಗೆ ಕಳವಳ ವ್ಯಕ್ತಮಾಡಿ ತಕ್ಷಣ ಸರ್ಕಾರ ಗೋವಾ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಏಕೆ ಮನೆಗಳು ನೆಲಸಮವಾಯಿತು, ಅವರಿಗೆ ಖಾಯಂ ಸ್ವರೂಪದ ಪುನರ್ವಸತಿ ಮಾಡುವ ಬಗ್ಗೆ ಸರ್ಕಾರ ಒತ್ತಡ ತಂದು ಕನ್ನಡಿಗರಿಗೆ ಒಂದು ಪರಿಹಾರವನ್ನು